**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-233/2003 **PW**-1

**ದಿಃ 26.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 10 ರಿಂದ 12ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

1. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಒಟ್ಟು ನಾಲ್ಕು ಕ್ರಯ ಪತ್ರಗಳು ಆಗಿವೆ. ಸದರಿ ಕ್ರಯ ಪತ್ರಗಳು 2000 ಹಾಗೂ 2001 ನೇ ಸಾಲಿನಲ್ಲಿ ಆಗಿರುತ್ತವೆ. ದಾವಾ ಸಲ್ಲಿಸಬೇಕಾದರೆ ಎಷ್ಟು ಕ್ರಯ ಪತ್ರಗಳು ಆಗಿವೆ ಎಂಬುದನ್ನು ಪರಿಶೀಲನೆ ಮಾಡಿ ಸಲ್ಲಿಸಿರುತ್ತೇನೆಂದರೆ ಸರಿ. ದಾವಾ ಸಲ್ಲಿಸುವ ಪೂರ್ವದಲ್ಲಿ ಈ ನಾಲ್ಕು ಕ್ರಯ ಪತ್ರಗಳು ಆಗಿರುತ್ತವೆಂದರೆ ಸರಿ. ದಾವಾ ಹಾಕುವ ಕಾಲಕ್ಕೆ ಸದರಿ ಕ್ರಯ ಪತ್ರಗಳ ಬಗ್ಗೆ ನಾನು ಪರಿಹಾರ ಕೇಳಿಲ್ಲ ಎಂದರೆ ಸಾಕ್ಷಿ ಸದರಿ ಕ್ರಯ ಪತ್ರಗಳು ತಪ್ಪಾಗಿವೆ ಎಂದು ನಾನು ಕೇಳಿದ್ದೇನೆ ಎನ್ನುತ್ತಾರೆ.

2. 2019 ನೇ ಸಾಲಿನಲ್ಲಿ ನಾನು ದಾವಾ ತಿದ್ದುಪಡಿ ಕೇಳಿ ಎರಡು ಕ್ರಯ ಪತ್ರಗಳು ರದ್ದುಬಾತಲು ಇರುತ್ತವೆಂದು ಪ್ರಾರ್ಥನೆ ಮಾಡಿರುತ್ತೇನೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2019 ರಲ್ಲಿ ನಾನು ದಾವಾ ತಿದ್ದಪಡಿಗಾಗಿ ಅರ್ಜಿ ಸಲ್ಲಿಸಿದ್ದೆನು. ಸದರಿ ತಿದ್ದುಪಡಿ ಮೂಲಕ ಎರಡು ಕ್ರಯಪತ್ರಗಳಿಗೆ ಸಂಬಂದಿಸಿದಂತೆ ಪರಿಹಾರ ಕೇಳಿದ್ದೆ ಎಂದರೆ ಸರಿ. ನಾನು ಸಲ್ಲಿಸಿದ ಅರ್ಜಿ ವಜಾಗೊಂಡಿದೆ ಎಂದರೆ ಸರಿ. ನಾನು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಮಾಡಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ subject to limitation ಎಂಬುದಾಗಿ ನನ್ನ ಮನವಿ ಪುರಸ್ಕರಿಸಲಾಯಿತು ಎಂದರೆ ಸಾಕ್ಷಿ ಅಲ್ಲಿ ಏನಾಯಿತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. 2003 ರಲ್ಲಿ ನಾಲ್ಕು ಕ್ರಯ ಪತ್ರಗಳಿಗೆ ಸಂಬಂದಿಸಿದಂತೆ ಪರಿಹಾರ ಕೇಳಲು ನನಗೆ ಯಾವದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. 2004 ನೇ ಸಾಲಿನಲ್ಲಿ ಪ್ರತಿವಾದಿ 10 ರಿಂದ 13 ರವರು ತಮ್ಮ ಕೈಪಿಯತ್ತನ್ನು ಸಲ್ಲಿಸಿರುತ್ತಾರೆಂದರೆ ಸರಿ. ಏನೇನು ವ್ಯವಹಾರಗಳು ಆಗಿವೆ ಎಂಬ ಬಗ್ಗೆ ಕೈಪಿಯತ್ತನಲ್ಲಿ ನಮೂದು ಮಾಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಇವತ್ತಿನವರೆಗೂ ನೀವು ಅವರು ಏನು ದಾಖಲೆಗಳನ್ನು ಹಾಕಿರುತ್ತಾರೆ ಹಾಗೂ ತಮ್ಮ ಕೈಪಿಯತ್ತನಲ್ಲಿ ಏನು ಬರೆಸಿರುತ್ತಾರೇಂದು ನೀವಾಗಲಿ ನಿಮ್ಮ ವಕೀಲರ ಮೂಲಕವಾಗಲಿ ತಿಳಿದುಕೊಂಡಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ಉದ್ದೇಶಪೂರ್ವಕವಾಗಿ ಸರಿಯಾದ ದಾಖಲೆಗಳನ್ನು ಹಾಜರುಪಡಿಸಲು ಈಗ ಸದರಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದರೆ ಸಾಕ್ಷಿ ನನಗೆ 2019 ರಲ್ಲಿ ಗೊತ್ತಾದ ನಂತರ ತಂದು ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ.

3. ಸರ್ವೆ ನಂ:623/ಎ 1/4 ಸಿ , 1 ಎಕರೆ ಜಮೀನನ್ನು 2007 ರಲ್ಲಿ ಕೆ ಐ ಎ ಡಿ ಬಿ ರವರು ಸ್ವಾದೀನಪಡಿಸಿಕೊಂಡಿರುತ್ತಾರೆಂದರೆ ಸರಿ. ಸದರಿ ಆಸ್ತಿ ಸ್ವಾದೀನಪಡಿಸಿಕೊಳ್ಳಬೇಕಾದರೆ ಮಾಲ್ಕೀಯನ್ನು ಖಚಿತಪಡಿಸಿಕೊಂಡು ಅವರಿಗೆ ಪರಿಹಾರ ಕೊಡುತ್ತಾರೆಂದರೆ ಸಾಕ್ಷಿ ಮೊದಲು ಹೌದು ಎಂದು ನುಡಿದು ನಂತರ ನಾನು ಆ ಸಮಯದಲ್ಲಿ ಕ್ಲೇಮ ಮಾಡಿದ್ದೆ ಎನ್ನುತ್ತಾರೆ. ಎಲ್ಲಾ ಪರಿಹಾರವನ್ನು ಪ್ರತಿವಾದಿ 10 ರಿಂದ 13 ರವರು ಕ್ಲೇಮ ಮಾಡಿರುತ್ತಾರೆಂದರೆ ಸರಿ. ನಾನು ಈ ಬಗ್ಗೆ ಯಾವದೇ ತಕರಾರು ಮಾಡಿಲ್ಲ ಎಂದರೆ ಸಾಕ್ಷಿ ನಾನು ತಕರಾರು ಮಾಡಿದ್ದೆ ಎನ್ನುತ್ತಾರೆ. ನಾನು ಕೆ ಐ ಎ ಡಿ ಬಿ ಇಲಾಖೆಗೆ ಪತ್ರ ಬರೆದಿದ್ದೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಪ್ರತಿವಾದಿ 10 ರಿಂದ 13 ರವರು ಸದರಿ ಪರಿಹಾರವನ್ನು ಪಡೆದುಕೊಂಡ ನಂತರ ನೀವು ಮೇಲ್ಮನವಿ ಏನಾದರೂ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ. ಸದರಿ ಪ್ರತಿವಾದಿ 10 ರಿಂದ 13 ರವರು ಪರಿಹಾರವನ್ನು ತೆಗೆದುಕೊಂಡಿರುತ್ತಾರೆಂದು ಅದು ಸರಿಯಲ್ಲ ಎಂದು ನಾನು ತಕರಾರು ಮಾಡಿಯೇ ಇಲ್ಲ ಎಂದರೆ ಸಾಕ್ಷಿ ನಾನು ಆವಾಗಲೇ ತಕರಾರು ಮಾಡಿರುತ್ತೇನೆ ಎನ್ನುತ್ತಾರೆ. ಸರ್ವೆ ನಂ: 627/ಎ/3, 2 ಎಕರೆ 5 ಗುಂಟೆ ಆಸ್ತಿ ಅರ್ಜುನಸಾ ಇವರ ಹೆಸರಿನಲ್ಲಿದೆ ಎಂದರೆ ಸರಿ. ಸದರಿ ಆಸ್ತಿ ನಾನು ದಾವಾ ಸಲ್ಲಿಸುವ ಪೂರ್ವದಲ್ಲೇ ಕನ್ವರ್ಸನ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಬಿನ್ ಶೇತ್ಕಿ ಆಗಿತ್ತು ಎನ್ನುತ್ತಾರೆ. ಅದರಲ್ಲಿ ಪ್ಲಾಟುಗಳು ಕೂಡಾ ಆಗಿದ್ದವು ಎಂದರೆ ಸರಿ. ಆ ನಂತರ ಸಾಕಷ್ಟು ವಾಟ್ನೀಗಳು ಆಗಿವೆ ಎಂದರೆ ಸರಿ.

4. ಸದರಿ ಸರ್ವೆ ನಂ: 627/ಎ/3, 2 ಎಕರೆ 5 ಗುಂಟೆ ಆಸ್ತಿಯಲ್ಲಿರುವಂತಹವವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ನಾನು ಸೇರಿಸಿಲ್ಲ ಎಂದರೆ ಸರಿ. ದಾವಾ ಸಲ್ಲಿಸುವ ಕಾಲಕ್ಕೆ ಸರ್ವೆ ನಂ: 627/ಎ/3 , 2 ಎಕರೆ 5 ಗುಂಟೆ ಆಸ್ತಿಯ ಉತಾರವನ್ನು ನಾನು ಹಾಜರುಪಡಿಸಿದ್ದೇನೆಂದರೆ ಸರಿ. ಸದರಿ ದಾಖಲೆಯಲ್ಲಿ ಏನೇನು ವ್ಯವಹಾರಗಳು ಆಗಿವೆ ಎಂಬ ಬಗ್ಗೆ ನಮೂದು ಆಗಿದೆ ಎಂದರೆ ಸರಿ. ಸದರಿ ವ್ಯವಹಾರಗಳ ಬಗ್ಗೆ ನಾನು ಯಾವದೇ ಪರಿಹಾರವನ್ನು ದಾವಾ ಸಲ್ಲಿಸುವ ಕಾಲಕ್ಕೆ ಕೇಳಿಲ್ಲ ಎಂದರೆ ಸರಿ. ನಾನು ಈ ಹಿಂದೆ ದಾವಾದಲ್ಲಿ ಏನೇನು ತಪ್ಪು ಮಾಡಿದ್ದೀರಾ ಅವುಗಳನ್ನು ಸರಿಪಡಿಸಲು ಈಗ ಈ ದಾಖಲೆಗಳನ್ನು ತಂದು ಹಾಜರುಪಡಿಸಿರುತ್ತೇನೆಂದರೆ ಸಾಕ್ಷಿ ನಾನು ಅವುಗಳನ್ನು ನ್ಯಾಯಾಲಯದಿಂದಲೇ ತೆಗೆದುಕೊಂಡು ಬಂದಿರುತ್ತೇನೆ ಎನ್ನುತ್ತಾರೆ.

**ಪ್ರತಿವಾದಿ 13 ರ ಪರವಾಗಿ ಪ್ರತಿವಾದಿ10 ರಿಂದ 12 ರವರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವದಾಗಿ ಅವರ ಮನವಿಯನ್ನು ಪುರಸ್ಕರಿಸಿ ಸದರಿ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**